STATE BANK OF MYSORE
'G' Seva Branch
Bangalore-1
15/01/13

### ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| ವಿಷಯ: | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ – ಕರ್ನಾಟಕ ಉದ್ಯೋಗ ಖಾತರಿ ನಿಧಿಯಿಂದ ಜಿಲ್ಲಾ ಪಂಚಾಯಿತಿಗಳ (ಗ್ರಾಮ ಪಂಚಾಯತಿಗಳಿಗೆ) 2012–13ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡುವ ಬಗ್ಗೆ. |
| ಉಲ್ಲೇಖ: | ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿದಿ ನಿಯಮ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 37 NRE 2008 ದಿನಾಂಕ:16–03–2009. |

**ಪ್ರಸ್ತಾವನೆ:**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿ ನಿಯಮಗಳು 2008ರ ನಿಯಮ 3ರ ಅಡಿ ಮೇಲೆ ಉಲ್ಲೇಖದಲ್ಲಿನ ಸರ್ಕಾರದ ಆದೇಶದನ್ವಯ ರಾಜ್ಯ ಉದ್ಯೋಗ ಖಾತರಿ ನಿಧಿಯನ್ನು ಸ್ಥಾಪಿಸಲಾಗಿರುತ್ತದೆ. ಸದರಿ ನಿಯಮಗಳಡಿ **ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ** ಅನುದಾನವನ್ನು **ಬಿಜಾಪುರ, ಚಿಕ್ಕಮಗಳೂರು, ದಾವಣಗೆರೆ, ಹಾಸನ ಮತ್ತು ರಾಯಚೂರು ಜಿಲ್ಲಾ** ಪಂಚಾಯಿತಿಗಳಿಗೆ ಬಿಡುಗಡೆ ಮಾಡಬೇಕಾಗಿರುತ್ತದೆ. ಯೋಜನೆಯ ಅನುಷ್ಟಾನದ ಪ್ರಗತಿಯನ್ನು ದಿನಾಂಕ 11–01–2013 ರಂದು ಪರಿಶೀಲಿಸಲಾಗಿದ್ದು, ಅದರಂತೆ ಯೋಜನೆಯ ಅನುಷ್ಠಾನಕ್ಕಾಗಿ **ರಾಜ್ಯದ 05 ಜಿಲ್ಲಾ ಪಂಚಾಯಿತಿಗಳಿಗೆ ಒಟ್ಟು ₹.1100.00ಲಕ್ಷ** (₹.ಹನ್ನೊಂದು ಕೋಟಿಗಳು ಮಾತ್ರ)ಗಳ ಅನುದಾನವನ್ನು ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ. **ಈ ಅನುದಾನವನ್ನು ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿ ಬಾಕಿ ಬಿಲ್ಲುಗಳ ತೀರುವಳಿಗಾಗಿ ಅಥವಾ ಅನುದಾನ ಶೂನ್ಯವಾಗಿರುವ ಗ್ರಾಮ ಪಂಚಾಯಿತಿಗಳಿಗೆ ಅವಶ್ಯಕತೆಗನುಗುಣವಾಗಿ ಬಿಡುಗಡೆ ಮಾಡಲು ನೀಡಲಾಗಿದೆ.**

**ಸರ್ಕಾರದ ಆದೇಶ ಸಂ:ಗ್ರಾಅಪ:154.ಉಖಾಯೋ–2012 ಬೆಂಗಳೂರು ದಿನಾಂಕ:11–01–2013,(ಕ್ರ.ಸ.104)**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಗಣಿಸಿ **ರಾಜ್ಯದ ಈ ಕೆಳಗೆ ಸೂಚಿಸಿರುವ 05 ಜಿಲ್ಲಾ ಪಂಚಾಯಿತಿಗಳಿಗೆ ಒಟ್ಟು ₹.1100.00ಲಕ್ಷ (₹.ಹನ್ನೊಂದು ಕೋಟಿಗಳು ಮಾತ್ರ)**ಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ನಿಧಿಯಿಂದ ನೇರವಾಗಿ ವರ್ಗಾಯಿಸಲು ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಜಿಲ್ಲೆಯ ಹೆಸರು | ವರ್ಗಾಯಿಸಬೇಕಾಗಿರುವ ಅನುದಾನದ ವಿವರ | | |
|---|---|---|---|---|
| | | ಕೇಂದ್ರ ಪಾಲು | ರಾಜ್ಯ ಪಾಲು | ಒಟ್ಟು |
| 1 | ಬಿಜಾಪುರ | 180.00 | 20.00 | 200.00 |
| 2 | ಚಿಕ್ಕಮಗಳೂರು | 90.00 | 10.00 | 100.00 |
| 3 | ದಾವಣಗೆರೆ | 450.00 | 50.00 | 500.00 |
| 4 | ಹಾಸನ | 90.00 | 10.00 | 100.00 |
| 5 | ರಾಯಚೂರು | 180.00 | 20.00 | 200.00 |
| | ಒಟ್ಟು | 990.00 | 110.00 | 1100.00 |

ಈ ಅನುದಾನವನ್ನು ಎಸ್.ಬಿ.ಎಮ್., ಎಮ್.ಎಸ್.ಬಿಲ್ಡಿಂಗ್ ಶಾಖೆ, ಖಾತೆ ಸಂಖ್ಯೆ:64002298270 ಬೆಂಗಳೂರು ಇಂದ ಅನುಬಂಧದಲ್ಲಿರುವ 05 ಜಿಲ್ಲಾ ಪಂಚಾಯಿತಿಗಳ ಬ್ಯಾಂಕ್ ಖಾತೆಗೆ ಒಟ್ಟು **₹.1100.00** ಲಕ್ಷ (₹.ಹನ್ನೊಂದು ಕೋಟಿಗಳು ಮಾತ್ರ)ಗಳನ್ನು ನೇರವಾಗಿ ವರ್ಗಾಯಿಸಲು ಆದೇಶಿಸಿದೆ. ಬ್ಯಾಂಕ್ ಖಾತೆಗೆ ಜಮಾವಾಗುವಲ್ಲಿ ವಿಳಂಭವಾದಲ್ಲಿ ನಿರ್ದೇಶನಾಲಯದ ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರ) ಇವರ ದೂರವಾಣಿ ಸಂ:080–22342161 ಕ್ಕೆ ಸಂಪರ್ಕಿಸಲು ಸೂಚಿಸಿದೆ.

ಈ ಆದೇಶದ ಪ್ರತಿಯನ್ನು ಅಂತರ್ಜಾಲ e-mail ID:nregs-ka@nic.in ಸಂದೇಶದ ಮೂಲಕ ಕಳುಹಿಸಲಾಗಿದೆ.

<u>ಷರತ್ತುಗಳು:-</u>

01. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮಾರ್ಗಸೂಚಿಯನ್ವಯ ವೆಚ್ಚ ಮಾಡತಕ್ಕದ್ದು.
02. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಅವಶ್ಯವಿರುವ ಗ್ರಾಮ ಪಂಚಾಯಿತಿಗಳಿಗೆ ನಿಯಮಾನುಸಾರ ಒಂದು ವಾರದೊಳಗೆ ಬಿಡುಗಡೆ ಮಾಡಲು ಕ್ರಮವಹಿಸಿ MIS ನಲ್ಲಿ ಕಡ್ಡಾಯವಾಗಿ ದಾಖಲಿಸತಕ್ಕದ್ದು.
03. ಮುಂದಿನ ಅನುದಾನ ಬೇಡಿಕೆ ಪ್ರಸ್ತಾವನೆ ಸಲ್ಲಿಸುವಾಗ ಜಾಬ್‌ಕಾರ್ಡ್ ಶೇ.100ರಷ್ಟು ನ್ಯಾಯಸಮ್ಮತ (Validation) ಮಾಡಿ ದೃಢೀಕರಿಸುವುದು ಹಾಗೂ ಒಂದು ಕುಟುಂಬಕ್ಕೆ ಒಂದೇ ಜಾಬ್‌ಕಾರ್ಡ್ ಇರುವಂತೆ ಎಲ್ಲಾ ಅವಶ್ಯಕ್ರಮ ಜರುಗಿಸುವುದು.
04. ಈ ಯೋಜನೆಯ ಅಡಿ ಅನುಷ್ಠಾನಗೊಳ್ಳುವ ಕಾಮಗಾರಿಗಳ ಪೈಕಿ ಜಿಲ್ಲಾ ಪಂಚಾಯತ್‌ನಿಂದ ಶೇ.10, ಕಾರ್ಯಕ್ರಮ ಅಧಿಕಾರಿಗಳಿಂದ ಶೇ.25 ಹಾಗೂ ಅನುಷ್ಠಾನ ಅಧಿಕಾರಿಗಳಿಂದ ಶೇ.100 ರಷ್ಟು ಕಾಮಗಾರಿಗಳ ಪರಿಶೀಲನೆ ನಡೆಸಿದ ಬಗ್ಗೆ ದೃಢೀಕರಿಸುವುದು.
05. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಅನುಷ್ಠಾನದ ಪೈಕಿ ಈಗಾಗಲೆ MIS ನಲ್ಲಿರುವ ಅಂಕಿ ಅಂಶಗಳಿಗೂ ಕ್ಷೇತ್ರದಲ್ಲಿರುವ ಭೌತಿಕ ಹಾಗೂ ಆರ್ಥಿಕ ಪ್ರಗತಿಗೆ ಹೊಂದಾಣಿಕೆಯಾಗತಕ್ಕದ್ದು.
06. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಉಪಯೋಗಿಸಿಕೊಂಡು ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯಿತಿಗಳಲ್ಲಿ ಸ್ಥಿರಾಸ್ತಿ/ಚರಾಸ್ತಿಯನ್ನು ಸೃಜಿಸಿದಲ್ಲಿ ಆ ಬಗ್ಗೆ ವಿವರಗಳನ್ನು ಸ್ಥಿರಾಸ್ತಿ ವಹಿಯ ದಾಖಲೆ ನಿರ್ವಹಿಸತಕ್ಕದ್ದು.
07. ಬಿಡುಗಡೆಯಾದ ಅನುದಾನಕ್ಕೆ ಸಂಬಂಧಪಟ್ಟಂತೆ ನಗದು ಪುಸ್ತಕವನ್ನು ನಿರ್ವಹಿಸತಕ್ಕದ್ದು, ಹಾಗೂ ಜಮಾ ಖರ್ಚಿಗೆ ಸಂಬಂಧಿಸಿದಂತೆ ವಿವರಗಳನ್ನು MISನಲ್ಲಿ ಅಳವಡಿಸಿ Bank Pass Sheet ನೊಂದಿಗೆ ಮರು ಹೊಂದಾಣಿಕೆ ಕಾರ್ಯವನ್ನು ಪ್ರತಿ ತಿಂಗಳೂ ತಪ್ಪದೇ ಕೈಗೊಳ್ಳುವುದರ ಮೂಲಕ ಒಂದೇ ಅಂಕಿಅಂಶ ಎಲ್ಲಾ ದಾಖಲೆಗಳಲ್ಲಿ ಇರುವಂತೆ ನೋಡಿಕೊಳ್ಳಲು ಸೂಕ್ತ ಕ್ರಮ ವಹಿಸುವುದು.
08. ಯೋಜನೆ ಅನುಷ್ಠಾನದಲ್ಲಿ ಸಾಮಾಜಿಕ ಲೆಕ್ಕ ತಪಾಸಣೆ (Social Audit) ಪ್ರಕ್ರಿಯೆ ನಡೆದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
09. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮಾರ್ಗಸೂಚಿಗಳು ಪಾಲನೆಯಾಗಿರುವ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು.

ಮೇಲಿನ ಎಲ್ಲಾ ಷರತ್ತುಗಳನ್ನು ಚಾಚೂ ತಪ್ಪದೆ ಪಾಲಿಸಲು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮುನೀಷ್ ಮೌದ್ಗಿಲ್)
ನಿರ್ದೇಶಕರು
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಮತ್ತು ಸರ್ಕಾರದ ಪದನಿಮಿತ್ತ ಹೆಚ್ಚುವರಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ದೂರವಾಣಿ ಸಂಖ್ಯೆ:080-22372738

ಗೆ:

01. ಸಹಾಯಕ ಮಹಾವ್ಯವಸ್ಥಾಪಕರು, ಎಸ್.ಬಿ.ಎಮ್., ಜಿ-ಸೇವಾ ಶಾಖೆ, ಎಲ್/ಸಿ/ರೋಡ್, ಶಿವಾಜಿನಗರ\ ಬೆಂಗಳೂರು ಇವರಿಗೆ ಅನುಬಂಧದಲ್ಲಿ ತೋರಿಸಿರುವಂತೆ **ಬಿಜಾಪುರ, ಚಿಕ್ಕಮಗಳೂರು, ದಾವಣಗೆರೆ, ಹಾಸನ ಮತ್ತು ರಾಯಚೂರು ಜಿಲ್ಲಾ ಪಂಚಾಯಿತಿಗಳಿಗೆ ಒಟ್ಟು ₹.1100.00ಲಕ್ಷ(₹.ಹನ್ನೊಂದು ಕೋಟಿಗಳು ಮಾತ್ರ)** ಗಳನ್ನು ಗಳನ್ನು ತಕ್ಷಣವೇ ಹಣವನ್ನು ವರ್ಗಾಯಿಸಲು ಕೋರಿ ಕಳುಹಿಸಲಾಗಿದೆ. ಯಾವುದೇ ಕಾರಣಕ್ಕೆ ಅನುದಾನವು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳ ಖಾತೆಗೆ ಹೊಂದಾಣಿಕೆಯಾಗದೆ ಹಿಂತಿರುಗಿ ಬಂದಲ್ಲಿ ವಿವರವನ್ನು ಕೂಡಲೇ ಲೆಕ್ಕಪತ್ರ ಶಾಖೆಗೆ ನೀಡುವುದು.
02. ಅಧ್ಯಕ್ಷರು/ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಅನುಬಂಧದಲ್ಲಿರುವಂತೆ **ಬಿಜಾಪುರ, ಚಿಕ್ಕಮಗಳೂರು, ದಾವಣಗೆರೆ, ಹಾಸನ ಮತ್ತು ರಾಯಚೂರು** ಜಿಲ್ಲಾ ಪಂಚಾಯತ್‌ರವರುಗಳ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
03. ಮುಖ್ಯ ಲೆಕ್ಕಾಧಿಕಾರಿಗಳು, ಅನುಬಂಧದಲ್ಲಿರುವಂತೆ **ಸಂಬಂಧಪಟ್ಟ 05 ಜಿಲ್ಲಾ** ಪಂಚಾಯತಿಗಳು.
04. ಉಪಮಹಾಲೇಖಪಾಲರು, (ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ) ಮಹಾಲೇಖಪಾಲರ ಕಛೇರಿ, ಹೊಸಕಟ್ಟಡ, (ANNEX C) ಬೆಂಗಳೂರು.
05. ಪ್ರಾದೇಶಿಕ ಆಯುಕ್ತರು, ಆಯುಕ್ತರ ಕಛೇರಿ, **ಬೆಂಗಳೂರು, ಮೈಸೂರು, ಬೆಳಗಾಂ, ಗುಲ್ಬರ್ಗ,**

<u>ಪ್ರತಿಯನ್ನು:-</u>

01. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಜಿಲ್ಲಾ ಪಂಚಾಯತ್) ವಿಧಾನ ಸೌಧ, ಬೆಂಗಳೂರು
02. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ,ಕಾವೇರಿ ಭವನ, ಬೆಂಗಳೂರು.
03. ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಅನುಬಂಧದಲ್ಲಿರುವಂತೆ **ಸಂಬಂಧಪಟ್ಟ 05 ಜಿಲ್ಲೆಗಳು.**
04. ಜಂಟಿ ನಿರ್ದೇಶಕರು-I, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ MIS ನಲ್ಲಿ ಆರೋಹಣ (Upload) ಮಾಡಲು ಅಗತ್ಯ ಕ್ರಮಕ್ಕಾಗಿ.
05. ಶ್ರೀ ಶ್ರೀನಿವಾಸ ಹೆಚ್.ಎಮ್. ಗಣಕಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ Website ನಲ್ಲಿ ಆರೋಹಣ ಮಾಡಲು ಅಗತ್ಯ ಕ್ರಮಕ್ಕಾಗಿ.

# Abstract

## Release of funds

| RO_NO | District Name | Release_date | Rel_amount(Lakhs) |
|---|---|---|---|
| 121 | Bijapur | 11/1/2013 | 200 .00 |
| 121 | Chikmagalur | 11/1/2013 | 100 .00 |
| 121 | Davanagere | 11/1/2013 | 500 .00 |
| 121 | Hassan | 11/1/2013 | 100 .00 |
| 121 | Raichur | 11/1/2013 | 200 .00 |

**Grand Total 1100.00 Lakhs**

Funds Released to GPs through ZP.

DIRECTOR.
MGNREGS,RDPRDept,Bangalore.

# ZILLA PANCHAYAT FUND RELEASED UNDER MGNREGS,2012-13

| Sl No | RO No | Dist name | Bank name | Account no | IFSC code | Branch name | Rel Amount(Rs in lakhs) | Release date |
|---|---|---|---|---|---|---|---|---|
| 1 | 121 | Bijapur | State Bank of India | 11034250778 | SBIN0007225 | Treasury Branch, Bijapur | 200.00 | 11/1/2013 |
| 2 | 121 | Chikmagalur | Copraration Bank | 008100101028002 | CORP0000081 | Chikmagalur | 100.00 | 11/1/2013 |
| 3 | 121 | Davanagere | State Bank of Mysore | 64002175166 | SBMY0040108 | Main,Davanagere | 500.00 | 11/1/2013 |
| 4 | 121 | Hassan | State Bank of Mysore | 64016035247 | SBMY0040045 | Hassan | 100.00 | 11/1/2013 |
| 5 | 121 | Raichur | State Bank of Hyderabad | 62059591662 | SBHY0020203 | Main Branch Raichur | 200.00 | 11/1/2013 |

TOTAL 1100.00 LAKHS

Director
MGNREGS,RDPRDept.Bangalore